# ಪತ್ರಿಕಾ ಪರಿಷತ್ತು ಅಧಿನಿಯಮ, 1978

**(1978ರ ಅಧಿನಿಯಮ ಸಂಖ್ಯೆ 37)**

**[ಇದನ್ನು 24-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 21ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 2 ರಿಂದ 9ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

**ಅಧ್ಯಾಯ-I**

**ಪ್ರಾರಂಭಿಕ**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಜಮ್ಮು ಮತ್ತು ಕಾಶ್ಮೀರ ಅಥವಾ ಸಿಕ್ಕಿಂ ರಾಜ್ಯಕ್ಕೆ ವ್ಯಾಪ್ತವಾಗದ ಅಧಿನಿಯಮಿತಿಗಳಿಗೆ ಸಂಬಂಧಿಸಿದಂತೆ ಅರ್ಥಾನ್ವಯ ನಿಯಮ.

**ಅಧ್ಯಾಯ-II**

**ಪತ್ರಿಕಾ ಪರಿಷತ್ತಿನ ಸ್ಥಾಪನೆ**

4. ಪರಿಷತ್ತಿನ ನಿಗಮನ
5. ಪರಿಷತ್ತಿನ ರಚನೆ
6. ಸದಸ್ಯರ ಪದಾವಧಿ ಮತ್ತು ನಿವೃತ್ತಿ
7. ಸದಸ್ಯರ ಸೇವಾ ಷರತ್ತುಗಳು
8. ಪರಿಷತ್ತಿನ ಸಮಿತಿಗಳು
9. ಪರಿಷತ್ತಿನ ಮತ್ತು ಸಮಿತಿಗಳ ಸಭೆಗಳು
10. ಸದಸ್ಯರ ಖಾಲಿ ಸ್ಥಾನಗಳು ಅಥವಾ ರಚನೆಯಲ್ಲಿನ ನ್ಯೂನತೆಯು, ಅವರ ಕಾರ್ಯಗಳನ್ನು ಮತ್ತು ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ
11. ಪರಿಷತ್ತಿನ ಸಿಬ್ಬಂದಿ
12. ಪರಿಷತ್ತಿನ ಆದೇಶಗಳು ಮತ್ತು ಇತರ ಲಿಖಿತಗಳ ಅಧಿಪ್ರಮಾಣನ

## ಅಧ್ಯಾಯ-III

### ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು


13. ಪರಿಷತ್ತಿನ ಉದ್ದೇಶಗಳು ಮತ್ತು ಪ್ರಕಾರ್ಯಗಳು

14. ವಾಗ್ದಂಡನೆ ಮಾಡಲು ಅಧಿಕಾರ

15. ಪರಿಷತ್ತಿನ ಸಾಮಾನ್ಯ ಅಧಿಕಾರಗಳು

16. ಫೀಜುಗಳನ್ನು ವಿಧಿಸುವುದು

17. ಪರಿಷತ್ತಿಗೆ ಸಂದಾಯಗಳು

18. ಪರಿಷತ್ತಿನ ನಿಧಿ

19. ಬಜೆಟ್

20. ವಾರ್ಷಿಕ ವರದಿ

21. ಮಧ್ಯಕಾಲೀನ ವರದಿಗಳು

22. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ


## ಅಧ್ಯಾಯ-IV

### ಸಂಕೀರ್ಣ


23. ಸದ್ಭಾವನೆಯಿಂದ ಕೈಕೊಂಡ ಕ್ರಮದ ಸಂರಕ್ಷಣೆ

24. ಸದಸ್ಯರು, ಮುಂತಾದವರು ಲೋಕ ನೌಕರರಾಗಿರತಕ್ಕುದು

25. ನಿಯಮ ರಚನಾಧಿಕಾರ

26. ವಿನಿಯಮಗಳ ರಚನಾಧಿಕಾರ.

# ಪತ್ರಿಕಾ ಪರಿಷತ್ತು ಅಧಿನಿಯಮ,1978

(1978ರ ಅಧಿನಿಯಮ ಸಂಖ್ಯೆ 37)

[7ನೇ ಸೆಪ್ಟೆಂಬರ್, 1978]

ಪತ್ರಿಕಾ ಸ್ವಾತಂತ್ರ್ಯವನ್ನು ಪರಿರಕ್ಷಿಸುವ ಮತ್ತು ಭಾರತದಲ್ಲಿನ ವೃತ್ತಪತ್ರಿಕೆಗಳ ಮತ್ತು ಸುದ್ದಿ ಏಜೆನ್ಸಿಗಳ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರುವ ಮತ್ತು ಸುಧಾರಿಸುವ ಉದ್ದೇಶಕ್ಕಾಗಿ ಪತ್ರಿಕಾ ಪರಿಷತ್ತನ್ನು ಸ್ಥಾಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೊಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು: –

## ಅಧ್ಯಾಯ–I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**– (1) ಈ ಅಧಿನಿಯಮವನ್ನು ಪತ್ರಿಕಾ ಪರಿಷತ್ತು ಅಧಿನಿಯಮ, 1978 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧ್ಯಕ್ಷ" ಎಂದರೆ ಪರಿಷತ್ತಿನ ಅಧ್ಯಕ್ಷ;

(ಬಿ) "ಪರಿಷತ್ತು" ಎಂದರೆ 4ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಭಾರತದ ವೃತ್ತ ಪತ್ರಿಕಾ ಪರಿಷತ್ತು;

(ಸಿ) "ಸದಸ್ಯ" ಎಂದರೆ ಪರಿಷತ್ತಿನ ಸದಸ್ಯ ಮತ್ತು ಅದು ಅದರ ಅಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) "ಸಂಪಾದಕ" ಮತ್ತು "ವೃತ್ತಪತ್ರಿಕೆ" ಎಂಬ ಪದಾವಳಿಗಳು ಮುದ್ರಣಾಲಯ ಮತ್ತು ನೋಂದಣಿ ಅಧಿನಿಯಮ, 1867 (1867ರ 25)ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರುತ್ತವೆ ಮತ್ತು "ಕಾರ್ಯನಿರತ ಪತ್ರಿಕೋದ್ಯೋಗಿ" ಎಂಬ ಪದಾವಳಿಯು ಅದಕ್ಕೆ ಕಾರ್ಯನಿರತ ಪತ್ರಿಕೋದ್ಯೋಗಿಗಳ ಮತ್ತು ಇತರ ವೃತ್ತಪತ್ರಿಕಾ ನೌಕರರ (ಸೇವಾ ಷರತ್ತುಗಳು) ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1955 (1955ರ 45)ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತವೆ.

**3. ಜಮ್ಮು ಮತ್ತು ಕಾಶ್ಮೀರ ಅಥವಾ ಸಿಕ್ಕಿಂ ರಾಜ್ಯಕ್ಕೆ ವ್ಯಾಪ್ತವಾಗದ ಅಧಿನಿಯಮಿತಿಗಳಿಗೆ ಸಂಬಂಧಿಸಿದಂತೆ ಅರ್ಥಾನ್ವಯ ನಿಯಮ.**– ಜಮ್ಮು ಮತ್ತು ಕಾಶ್ಮೀರ ಅಥವಾ ಸಿಕ್ಕಿಂ ರಾಜ್ಯದಲ್ಲಿ ಜಾರಿಯಲ್ಲಿ ಇಲ್ಲದೆ ಇರುವಂಥ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು, ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

## ಅಧ್ಯಾಯ–II

### ಪತ್ರಿಕಾ ಪರಿಷತ್ತಿನ ಸ್ಥಾಪನೆ

**4. ಪರಿಷತ್ತಿನ ನಿಗಮನ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಭಾರತದ ಪತ್ರಿಕಾ ಪರಿಷತ್ತು ಎಂಬ ಹೆಸರಿನ ಪರಿಷತ್ತನ್ನು ಸ್ಥಾಪಿಸತಕ್ಕುದು.

(2) ಸದರಿ ಪರಿಷತ್ತು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಅದು ಸದರಿ ಹೆಸರಿನಿಂದ ದಾವೆಯನ್ನು ಹೂಡತಕ್ಕುದು ಹಾಗೂ ದಾವೆಗೆ ಗುರಿಯಾಗತಕ್ಕುದು.

**5. ಪರಿಷತ್ತಿನ ರಚನೆ.–** (1) ಪರಿಷತ್ತು ಒಬ್ಬ ಅಧ್ಯಕ್ಷನನ್ನು ಮತ್ತು ಇತರ ಇಪ್ಪತ್ತೆಂಟು ಸದಸ್ಯರನ್ನು ಒಳಗೊಂಡಿರತಕ್ಕುದು.

(2) ಅಧ್ಯಕ್ಷನು, ರಾಜ್ಯಸಭೆಯ ಸಭಾಪತಿ ಮತ್ತು ಲೋಕಸಭೆಯ ಅಧ್ಯಕ್ಷ ಮತ್ತು (6)ನೇ ಉಪ-ಪ್ರಕರಣದ ಮೇರೆಗೆ ಪರಿಷತ್ತಿನ ಸದಸ್ಯರು ಚುನಾಯಿಸಿದ ಒಬ್ಬ ವ್ಯಕ್ತಿ–ಇವರನ್ನು ಒಳಗೊಂಡ ಸಮಿತಿಯು ನಾಮನಿರ್ದೇಶನ ಮಾಡಿದ ವ್ಯಕ್ತಿಯಾಗಿರತಕ್ಕುದು ಮತ್ತು ಹಾಗೆ ಮಾಡಿದ ನಾಮನಿರ್ದೇಶನವು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅದನ್ನು ಅಧಿಸೂಚಿಸಿದ ದಿನಾಂಕದಿಂದ ಜಾರಿಗೆ ಬರತಕ್ಕುದು.

(3) ಇತರ ಸದಸ್ಯರುಗಳ ಪೈಕಿ–

(ಎ) ಹದಿಮೂರು ಸದಸ್ಯರನ್ನು, ಕಾರ್ಯನಿರತ ಪತ್ರಿಕೋದ್ಯಮಿಗಳ ಪೈಕಿ, ನಿಯಮಿಸಬಹುದಾದಂಥ ವಿಧಾನಕ್ಕೆ ಅನುಸಾರವಾಗಿ ನಾಮನಿರ್ದೇಶನ ಮಾಡತಕ್ಕುದು, ಅವರಲ್ಲಿ ಆರು ಜನ ವೃತ್ತಪತ್ರಿಕೆಗಳ ಸಂಪಾದಕರಾಗಿರತಕ್ಕುದು ಮತ್ತು ಉಳಿದ ಏಳು ಜನ, ಸಂಪಾದಕರನ್ನು ಹೊರತುಪಡಿಸಿ ಕಾರ್ಯನಿರತ ಪತ್ರಿಕೋದ್ಯೋಗಿಗಳಾಗಿರತಕ್ಕುದು. ಆದಾಗ್ಯೂ ಭಾರತೀಯ ಭಾಷೆಗಳಲ್ಲಿ ಪ್ರಕಟಿಸಿದ ವೃತ್ತಪತ್ರಿಕೆಗಳಿಗೆ ಸಂಬಂಧಪಟ್ಟಂತೆ ಸಂಪಾದಕರುಗಳನ್ನು ಹೊರತುಪಡಿಸಿ, ಅಂಥ ಸಂಪಾದಕರ ಮತ್ತು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಖ್ಯೆಯು ಅನುಕ್ರಮವಾಗಿ ಮೂರು ಮತ್ತು ನಾಲ್ಕಕ್ಕಿಂತ ಕಡಿಮೆ ಇರತಕ್ಕುದಲ್ಲ;

(ಬಿ) ಆರು ಜನರನ್ನು, ವೃತ್ತಪತ್ರಿಕೆಗಳ ಒಡೆತನವನ್ನು ಹೊಂದಿರುವ ಅಥವಾ ಅವುಗಳ ವ್ಯವಸ್ಥಾಪನೆಯ ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಗಳ ಪೈಕಿ, ನಿಯಮಿಸಬಹುದಾದಂಥ ವಿಧಾನಕ್ಕೆ ಅನುಸಾರವಾಗಿ ನಾಮನಿರ್ದೇಶನ ಮಾಡತಕ್ಕುದು; ಆದಾಗ್ಯೂ, ದೊಡ್ಡ ವೃತ್ತಪತ್ರಿಕೆಗಳ, ಮಧ್ಯಮ ವೃತ್ತಪತ್ರಿಕೆಗಳ ಮತ್ತು ಸಣ್ಣ ವೃತ್ತಪತ್ರಿಕೆಗಳ ಪ್ರತಿಯೊಂದು ಪ್ರವರ್ಗದಿಂದ ಇಬ್ಬರು ಪ್ರತಿನಿಧಿಗಳಿರತಕ್ಕುದು;

(ಸಿ) ಒಬ್ಬನನ್ನು, ಸುದ್ದಿ ಏಜೆನ್ಸಿಗಳನ್ನು ನಿರ್ವಹಿಸುತ್ತಿರುವ ವ್ಯಕ್ತಿಗಳ ಪೈಕಿ ನಿಯಮಿಸಬಹುದಾದಂಥ ವಿಧಾನಕ್ಕೆ ಅನುಸಾರವಾಗಿ ನಾಮನಿರ್ದೇಶನ ಮಾಡತಕ್ಕುದು.

(ಡಿ) ಮೂವರು, ಶಿಕ್ಷಣ ಮತ್ತು ವಿಜ್ಞಾನ, ಕಾನೂನು ಮತ್ತು ಸಾಹಿತ್ಯ ಹಾಗೂ ಸಂಸ್ಕೃತಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಗಳಾಗಿರತಕ್ಕುದು; ಅವರಲ್ಲಿ ಒಬ್ಬನನ್ನು, ಅನುಕ್ರಮವಾಗಿ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗವು, ಒಬ್ಬನನ್ನು ಭಾರತದ ಬಾರ್ ಕೌನ್ಸಿಲ್ ಹಾಗೂ ಇನ್ನೊಬ್ಬನನ್ನು ಸಾಹಿತ್ಯ ಅಕಾಡೆಮಿಯು ನಾಮನಿರ್ದೇಶನ ಮಾಡತಕ್ಕುದು;

(ಇ) ಐವರು ಸಂಸತ್ತಿನ ಸದಸ್ಯರಾಗಿರತಕ್ಕುದು. ಅವರಲ್ಲಿ ಮೂವರನ್ನು ಲೋಕಸಭೆಯ ಸದಸರ ಪೈಕಿ ಅಧ್ಯಕ್ಷನು ನಾಮನಿರ್ದೇಶನ ಮಾಡತಕ್ಕುದು ಮತ್ತು ಇಬ್ಬರನ್ನು ರಾಜ್ಯ ಸಭೆಯ ಅದರ ಸದಸ್ಯರ ಪೈಕಿ ಸಭಾಪತಿಯು ನಾಮನಿರ್ದೇಶನ ಮಾಡತಕ್ಕುದು:

ಪರಂತು, ಯಾವುದೇ ವೃತ್ತಪತ್ರಿಕೆಯ ಒಡೆತನವನ್ನು ಹೊಂದಿರುವ ಅಥವಾ ಅದರ ವ್ಯವಸ್ಥಾಪನೆಯ ವ್ಯವಹಾರವನ್ನು ನಡೆಸುತ್ತಿರುವ ಯಾವನೇ ಕಾರ್ಯನಿರತ ಪತ್ರಿಕೋದ್ಯೋಗಿಯು (ಎ) ಖಂಡದ ಮೇರೆಗೆ ನಾಮನಿರ್ದೇಶನಕ್ಕಾಗಿ ಅರ್ಹನಾಗಿರತಕ್ಕುದಲ್ಲ:

ಮತ್ತೂ ಪರಂತು, (ಎ) ಖಂಡದ ಮತ್ತು (ಬಿ) ಖಂಡದ ಮೇರೆಗಿನ ನಾಮನಿರ್ದೇಶನಗಳನ್ನು, ಒಂದೇ ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯ ಅಧೀನದಲ್ಲಿರುವ ಯಾವುದೇ ವೃತ್ತಪತ್ರಿಕೆಯ ಅಥವಾ ವೃತ್ತಪತ್ರಿಕೆಗಳ ಗುಂಪಿನಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಒಬ್ಬ ವ್ಯಕ್ತಿಗಿಂತ ಹೆಚ್ಚಿಗೆಯಿಲ್ಲದ ಹಾಗೆ ನಾಮನಿರ್ದೇಶಿತರಾದ ವ್ಯಕ್ತಿಗಳ ಪೈಕಿಯಿಂದ ಮಾಡತಕ್ಕುದು.

**ವಿವರಣೆ:-** (ಬಿ) ಖಂಡದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಸೂಚಿಸಬಹುದಾದಂತೆ, ಒಂದು "ವೃತ್ತಪತ್ರಿಕೆ" ಯನ್ನು ಅದರ ಪ್ರತಿ ಸಂಚಿಕೆಯ ಪ್ರಸಾರದ ಆಧಾರದ ಮೇಲೆ ದೊಡ್ಡ, ಮಧ್ಯಮ ಅಥವಾ ಸಣ್ಣ ವೃತ್ತಪತ್ರಿಕೆಯೆಂದು ವರ್ಗೀಕರಿಸಲಾಗಿದೆಯೆಂದು ಭಾವಿಸತಕ್ಕುದು.

(4) (3)ನೇ ಉಪಪ್ರಕರಣದ (ಎ) ಖಂಡದ, (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ಯಾವುದೇ ನಾಮನಿರ್ದೇಶನವನ್ನು ಮಾಡುವುದಕ್ಕೆ ಮುಂಚೆ, ಮೊದಲನೇ ಪರಿಷತ್ತಿನ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಮತ್ತು ತರುವಾಯದ ಯಾವುದೇ ಪರಿಷತ್ತಿನ ಸಂದರ್ಭದಲ್ಲಿ ಹಿಂದಿನ ಪರಿಷತ್ತಿನ ನಿವೃತ್ತನಾಗುವ ಅಧ್ಯಕ್ಷನು, ನಿಯಮಿಸಿದ ರೀತಿಯಲ್ಲಿ ಮೊದಲನೇ ಪರಿಷತ್ತಿನ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಮತ್ತು ತರುವಾಯದ ಪರಿಷತ್ತುಗಳ ಸಂದರ್ಭದಲ್ಲಿ ಆ ಪರಿಷತ್ತು ತಾನೇ ಈ ಬಗ್ಗೆ ಅಧಿಸೂಚಿಸಬಹುದಾದಂತೆ ಸದರಿ (ಎ) ಖಂಡದಲ್ಲಿ, (ಬಿ) ಖಂಡದಲ್ಲಿ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಲಾದಂಥ ಪ್ರವರ್ಗಗಳ ವ್ಯಕ್ತಿಗಳ ಸಂಘಗಳಿಂದ ನಾಮನಿರ್ದೇಶನ ಮಾಡಬೇಕಾದ ಸದಸ್ಯರ ಸಂಖ್ಯೆಯ ಎರಡರಷ್ಟನ್ನು ಒಳಗೊಂಡ ಹೆಸರುಗಳ ಪಟ್ಟಿಯನ್ನು ಆಹ್ವಾನಿಸತಕ್ಕುದು:

ಪರಂತು, ಸದರಿ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಪ್ರವರ್ಗದ ವ್ಯಕ್ತಿಗಳ ಯಾವುದೇ ಸಂಘವು ಇಲ್ಲದಿರುವಲ್ಲಿ, ಹೆಸರುಗಳ ಪಟ್ಟಿಗಳನ್ನು ಹಿಂದೆ ಹೇಳಿದಂತೆ ಅಧಿಸೂಚಿಸಬಹುದಾದಂಥ ಸುದ್ದಿ ಏಜೆನ್ಸಿಗಳಿಂದ ಆಹ್ವಾನಿಸತಕ್ಕುದು.

(5) ಕೇಂದ್ರ ಸರ್ಕಾರವು, (3)ನೇ ಉಪಪ್ರಕರಣದ ಮೇರೆಗೆ ಸದಸ್ಯರೆಂದು ನಾಮ ನಿರ್ದೇಶಿತರಾದ ವ್ಯಕ್ತಿಗಳ ಹೆಸರುಗಳನ್ನು ರಾಜಪತ್ರದಲ್ಲಿ ಅಧಿಸೂಚಿಸತಕ್ಕುದು ಮತ್ತು ಅಂಥ ಪ್ರತಿಯೊಂದು ನಾಮನಿರ್ದೇಶನವು, ಅದನ್ನು ಅಧಿಸೂಚಿಸಲಾದಂಥ ದಿನಾಂಕದಿಂದ ಜಾರಿಗೆ ಬರತಕ್ಕುದು.

(6) (5)ನೇ ಉಪಪ್ರಕರಣದ ಮೇರೆಗೆ ಅಧಿಸೂಚಿಸಲಾದ ಪರಿಷತ್ತಿನ ಸದಸ್ಯರು, ನಿಯಮಿಸಬಹುದಾದಂಥ ವಿಧಾನಕ್ಕೆ ಅನುಸಾರವಾಗಿ ಅವರುಗಳ ಪೈಕಿ, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯ ಸದಸ್ಯನಾಗಿರಲು ವ್ಯಕ್ತಿಯನ್ನು ಚುನಾಯಿಸತಕ್ಕುದು ಮತ್ತು ಅಂಥ ಚುನಾವಣೆಯ ಉದ್ದೇಶಕ್ಕಾಗಿ ಪರಿಷತ್ತಿನ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ಅವರುಗಳ ಪೈಕಿ ಆಯ್ಕೆ ಮಾಡಿದ ವ್ಯಕ್ತಿಯು ವಹಿಸತಕ್ಕುದು.

**6. ಸದಸ್ಯರ ಪದಾವಧಿ ಮತ್ತು ನಿವೃತ್ತಿ.-** ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಅಧ್ಯಕ್ಷನು ಮತ್ತು ಇತರ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕುದು:

ಪರಂತು, ಅಧ್ಯಕ್ಷನು ಅಂಥ ಪದವನ್ನು 5ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಪರಿಷತ್ತನ್ನು ಪುನರ್ ರಚಿಸುವವರೆಗೆ ಅಥವಾ ಆರು ತಿಂಗಳುಗಳ ಅವಧಿಯವರೆಗೆ ಇವುಗಳಲ್ಲಿ ಯಾವುದು ಮುಂಚಿನದೋ ಅಲ್ಲಿಯವರೆಗೆ ಧಾರಣ ಮಾಡುವುದು ಮುಂದುವರಿಯತಕ್ಕುದು.

(2) 5ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದ, (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ಸದಸ್ಯನೆಂದು ನಾಮನಿರ್ದೇಶಿತನಾದ ವ್ಯಕ್ತಿಯನ್ನು 14ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ವಾಗ್ದಂಡನೆ ಮಾಡಿರುವಲ್ಲಿ ಅವನು ಪರಿಷತ್ತಿನ ಸದಸ್ಯನಾಗಿರುವುದು ನಿಂತುಹೋಗತಕ್ಕುದು.

(3) 5ನೇ ಪ್ರಕರಣದ (3)ನೇ ಉಪ-ಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಸದಸ್ಯನ ಪದಾವಧಿಯು ಯಾವ ಸದನದಿಂದ ಆತನನ್ನು ನಾಮನಿರ್ದೇಶನ ಮಾಡಲಾಯಿತೋ ಆ ಸದನದ ಸದಸ್ಯನಾಗಿರುವುದು ನಿಂತುಹೋದ ಕೂಡಲೇ ಕೊನೆಗೊಳ್ಳತಕ್ಕುದು.

(4) ಒಬ್ಬ ಸದಸ್ಯನು, ಪರಿಷತ್ತಿನ ಮೂರು ನಿರಂತರ ಸಭೆಗಳಿಗೆ, ಪರಿಷತ್ತಿನ ಅಭಿಪ್ರಾಯದಲ್ಲಿ, ಸಾಕಷ್ಟು ಕಾರಣವಿಲ್ಲದೆ ಗೈರುಹಾಜರಾಗಿದ್ದರೆ ಅವನು ತನ್ನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕುದು.

(5) ಅಧ್ಯಕ್ಷನು, ಕೇಂದ್ರ ಸರ್ಕಾರಕ್ಕೆ ಬರಹದಲ್ಲಿ ನೋಟೀಸನ್ನು ಕೊಡುವ ಮೂಲಕ ಅವನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಯಾವನೇ ಇತರ ಸದಸ್ಯನು, ಅಧ್ಯಕ್ಷನಿಗೆ ಬರಹದಲ್ಲಿ ನೋಟೀಸನ್ನು ಕೊಡುವ ಮೂಲಕ ಅವನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆಯನ್ನು ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ಅಧ್ಯಕ್ಷನು ಅಂಗೀಕರಿಸಿದ ಮೇಲೆ ಅಧ್ಯಕ್ಷನು ಅಥವಾ ಸದಸ್ಯನು ಅವನ ಪದವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕುದು.

(6) (2)ನೇ ಉಪಪ್ರಕರಣದ, (3)ನೇ ಉಪಪ್ರಕರಣದ, (4)ನೇ ಉಪಪ್ರಕರಣದ ಅಥವಾ (5)ನೇ ಉಪ ಪ್ರಕರಣದ ಮೇರೆಗೆ ಅಥವಾ ಅನ್ಯಥಾ ಉದ್ಭವಿಸುವ ಯಾವುದೇ ಖಾಲಿ ಸ್ಥಾನವನ್ನು ಆದಷ್ಟು ಬೇಗ, ಹುದ್ದೆಯನ್ನು ಖಾಲಿ ಮಾಡಿದ ಸದಸ್ಯನನ್ನು ಯಾವ ರೀತಿಯಲ್ಲಿ ನಾಮನಿರ್ದೇಶನ ಮಾಡಲಾಗಿತ್ತೋ ಅದೇ ರೀತಿಯಲ್ಲಿ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕುದು ಮತ್ತು ಹಾಗೆ ನಾಮನಿರ್ದೇಶಿತನಾದ ಸದಸ್ಯನು, ಯಾವ ಸದಸ್ಯನ ಸ್ಥಾನದಲ್ಲಿ ಅವನನ್ನು ನಾಮನಿರ್ದೇಶನ ಮಾಡಲಾಯಿತೋ ಆ ಸದಸ್ಯನು ಪದಧಾರಣ ಮಾಡಬಹುದಾಗಿದ್ದ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕುದು.

(7) ನಿವೃತ್ತನಾಗುವ ಸದಸ್ಯನು, ಒಂದು ಅವಧಿಗಿಂತ ಹೆಚ್ಚಿಲ್ಲದ ಹಾಗೆ ಮರು ನಾಮನಿರ್ದೇಶನಕ್ಕಾಗಿ ಅರ್ಹನಾಗಿರತಕ್ಕುದು.

**7. ಸದಸ್ಯರ ಸೇವಾ ಷರತ್ತುಗಳು.-** (1) ಅಧ್ಯಕ್ಷನು ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕುದು ಮತ್ತು ಅವನಿಗೆ ಕೇಂದ್ರ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂಥ ಸಂಬಳವನ್ನು ಸಂದಾಯ ಮಾಡತಕ್ಕುದು ಮತ್ತು ಇತರ ಸದಸ್ಯರು ಪರಿಷತ್ತಿನ ಸಭೆಗಳಿಗೆ ಹಾಜರಾಗುವುದಕ್ಕಾಗಿ ನಿಯಮಿಸಬಹುದಾದಂಥ ಭತ್ಯಗಳು ಅಥವಾ ಫೀಜುಗಳನ್ನು ಸ್ವೀಕರಿಸತಕ್ಕುದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ಸದಸ್ಯರ ಸೇವಾ ಷರತ್ತುಗಳು ನಿಯಮಿಸಬಹುದಾದಂಥವು ಆಗಿರತಕ್ಕುದು.

(3) ಪರಿಷತ್ತಿನ ಸದಸ್ಯನ ಪದವು, ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಗೊಳ್ಳುವುದಕ್ಕಾಗಿ ಅಥವಾ ಸದಸ್ಯನಾಗಿರುವುದಕ್ಕಾಗಿ, ಅದರ ಧಾರಕನನ್ನು ಅನರ್ಹಗೊಳಿಸತಕ್ಕುದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

**8. ಪರಿಷತ್ತಿನ ಸಮಿತಿಗಳು.**– ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಪರಿಷತ್ತು, ಅದರ ಸದಸ್ಯರುಗಳ ಪೈಕಿ ಸಾಮಾನ್ಯ ಅಥವಾ ವಿಶೇಷ ಉದ್ದೇಶಗಳಿಗಾಗಿ ಅದು ಅವಶ್ಯವೆಂದು ಭಾವಿಸಬಹುದಾದಂಥ ಸಮಿತಿಗಳನ್ನು ರಚಿಸಬಹುದು ಮತ್ತು ಹಾಗೆ ರಚಿತವಾದ ಪ್ರತಿಯೊಂದು ಸಮಿತಿಯು, ಪರಿಷತ್ತು ಅದಕ್ಕೆ ವಹಿಸಿಕೊಟ್ಟಿರುವಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

(2) ಪರಿಷತ್ತು, ಪರಿಷತ್ತಿನ ಸದಸ್ಯರಲ್ಲದ, ಅದು ಸೂಕ್ತವೆಂದು ಯೋಚಿಸುವಂಥ ಸಂಖ್ಯೆಯ ಇತರ ವ್ಯಕ್ತಿಗಳನ್ನು, (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಸಮಿತಿಯ ಸಹ-ಸದಸ್ಯನನ್ನಾಗಿ ಸೇರಿಸಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕುದು.

(3) ಯಾವನೇ ಅಂಥ ಸದಸ್ಯನು, ಯಾವ ಸಮಿತಿಗೆ ಅವನನ್ನು ಸಹ-ಸದಸ್ಯನನ್ನಾಗಿ ಸೇರಿಸಿಕೊಳ್ಳಲಾಗಿದೆಯೋ ಆ ಸಮಿತಿಯ ಯಾವುದೇ ಸಭೆಗೆ ಹಾಜರಾಗಲು ಮತ್ತು ಅದರಲ್ಲಿನ ಚರ್ಚೆಯಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕುದು, ಆದರೆ, ಮತ ಚಲಾಯಿಸಲು ಹಕ್ಕನ್ನು ಹೊಂದಿರತಕ್ಕುದಲ್ಲ, ಮತ್ತು ಯಾವುದೇ ಇತರ ಉದ್ದೇಶಕ್ಕಾಗಿ ಸದಸ್ಯನಾಗಿರತಕ್ಕುದಲ್ಲ.

**9. ಪರಿಷತ್ತಿನ ಮತ್ತು ಸಮಿತಿಗಳ ಸಭೆಗಳು.**– ಪರಿಷತ್ತು ಅಥವಾ ಅದರ ಯಾವುದೇ ಸಮಿತಿಯು, ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕುದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪವನ್ನು ನಡೆಸುವ ಬಗ್ಗೆ ಉಪಬಂಧಿಸಬಹುದಾದ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕುದು.

**10. ಸದಸ್ಯರ ಖಾಲಿ ಸ್ಥಾನಗಳು ಅಥವಾ ಪರಿಷತ್ತಿನ ರಚನೆಯಲ್ಲಿನ ನ್ಯೂನತೆಯು ಅದರ ಕಾರ್ಯಗಳು ಮತ್ತು ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ.**– ಪರಿಷತ್ತಿನ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು ಆ ಪರಿಷತ್ತಿನಲ್ಲಿನ ಯಾವುದೇ ಖಾಲಿ ಸ್ಥಾನ ಉಂಟಾದ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗಿರುವುದಾಗಿ ಭಾವಿಸತಕ್ಕುದಲ್ಲ.

**11. ಪರಿಷತ್ತಿನ ಸಿಬ್ಬಂದಿ.**– ಪರಿಷತ್ತು, ಈ ಬಗ್ಗೆ, ಕೇಂದ್ರ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ದಕ್ಷತೆಯಿಂದ ನೆರವೇರಿಸುವುದಕ್ಕಾಗಿ ಒಬ್ಬ ಕಾರ್ಯದರ್ಶಿಯನ್ನು ಮತ್ತು ಅದು ಅವಶ್ಯವೆಂದು ಯೋಚಿಸುವಂಥ ಇತರ ನೌಕರರನ್ನು ನೇಮಕ ಮಾಡಬಹುದು.

(2) ಆ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥವು ಆಗಿರತಕ್ಕುದು.

**12. ಪರಿಷತ್ತಿನ ಆದೇಶಗಳು ಮತ್ತು ಇತರ ಲಿಖಿತಗಳ ಅಧಿಪ್ರಮಾಣನ.**– ಪರಿಷತ್ತಿನ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಅಧ್ಯಕ್ಷನ ಅಥವಾ ಈ ಬಗ್ಗೆ ಪರಿಷತ್ತು ಅಧಿಕೃತಗೊಳಿಸಿದ ಯಾವನೇ ಇತರ ಸದಸ್ಯನ ರುಜುವಿನ ಮೂಲಕ ಅಧಿಪ್ರಮಾಣಿಸತಕ್ಕುದು ಮತ್ತು ಪರಿಷತ್ತು ಹೊರಡಿಸಿದ ಇತರ ಲಿಖಿತಗಳನ್ನು ಕಾರ್ಯದರ್ಶಿಯ ಅಥವಾ ಈ ಬಗ್ಗೆ ಅಂಥದೇ ರೀತಿಯಲ್ಲಿ ಅಧಿಕೃತಗೊಳಿಸಿದ ಪರಿಷತ್ತಿನ ಯಾವನೇ ಇತರ ಅಧಿಕಾರಿಯ ರುಜುವಿನ ಮೂಲಕ ಅಧಿಪ್ರಮಾಣಿಸತಕ್ಕುದು.

## ಅಧ್ಯಾಯ-III

## ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು

**13. ಪರಿಷತ್ತಿನ ಉದ್ದೇಶಗಳು ಮತ್ತು ಪ್ರಕಾರ್ಯಗಳು.**– (1) ಪತ್ರಿಕಾ ಸ್ವಾತಂತ್ರ್ಯವನ್ನು ಪರಿರಕ್ಷಿಸುವುದು ಮತ್ತು ಭಾರತದಲ್ಲಿನ ವೃತ್ತಪತ್ರಿಕೆಗಳ ಮತ್ತು ಸುದ್ದಿ ಏಜೆನ್ಸಿಗಳ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರುವುದು ಮತ್ತು ಸುಧಾರಿಸುವುದು ಪರಿಷತ್ತಿನ ಉದ್ದೇಶಗಳಾಗಿರತಕ್ಕುದು.

(2) ಪರಿಷತ್ತು, ಅದರ ಉದ್ದೇಶಗಳ ಮುಂದುವರಿಕೆಯಲ್ಲಿ, ಈ ಕೆಳಕಂಡ ಪ್ರಕಾರ್ಯಗಳನ್ನು ನೆರವೇರಿಸಬಹುದು, ಎಂದರೆ:-

(ಎ) ವೃತ್ತಪತ್ರಿಕೆಗಳ ಮತ್ತು ಸುದ್ದಿ ಏಜನ್ಸಿಗಳ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಅವುಗಳಿಗೆ ಸಹಾಯ ಮಾಡುವುದು;

(ಬಿ) ಉನ್ನತ ವೃತ್ತೀಯ ಗುಣಮಟ್ಟಗಳಿಗೆ ಅನುಸಾರವಾಗಿ, ವೃತ್ತಪತ್ರಿಕೆಗಳಿಗೆ, ಸುದ್ದಿ ಏಜನ್ಸಿಗಳಿಗೆ ಮತ್ತು ಪತ್ರಿಕೋದ್ಯೋಗಿಗಳಿಗೆ ಆಚಾರ ಸಂಹಿತೆಯನ್ನು ಸ್ಥಾಪಿಸುವುದು;

(ಸಿ) ವೃತ್ತಪತ್ರಿಕೆಗಳು, ಸುದ್ದಿ ಏಜೆನ್ಸಿಗಳು ಮತ್ತು ಪತ್ರಿಕೋದ್ಯೋಗಿಗಳು ಸಾರ್ವಜನಿಕ ಅಭಿರುಚಿಯ ಉನ್ನತ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರುವ ಬಗ್ಗೆ ಮತ್ತು ನಾಗರೀಕತ್ವದ ಹಕ್ಕುಗಳು ಮತ್ತು ಜವಾಬ್ದಾರಿಗಳು-ಇವೆರಡರ ಬಗ್ಗೆ ಯೋಗ್ಯ ಪರಿಜ್ಞಾನದ ಪೋಷಣೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದು;

(ಡಿ) ಪತ್ರಿಕೋದ್ಯಮದ ವೃತ್ತಿಯಲ್ಲಿ ತೊಡಗಿರುವ ಎಲ್ಲರಲ್ಲಿಯೂ, ಜವಾಬ್ದಾರಿ ಮತ್ತು ಸಾರ್ವಜನಿಕ ಸೇವಾಭಾವನೆಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು;

(ಇ) ಸಾರ್ವಜನಿಕ ಹಿತಾಸಕ್ತಿಯ ಮತ್ತು ಮಹತ್ವದ ಸುದ್ದಿಗಳ ಪೂರೈಕೆಯನ್ನು ಮತ್ತು ಪ್ರಸಾರವನ್ನು ನಿರ್ಬಂಧಿಸುವ ಸಂಭವವಿರುವ ಯಾವುದೇ ಬೆಳವಣಿಗೆಯನ್ನು ಅವಲೋಕಿಸುವುದು;

(ಎಫ್) ಕೇಂದ್ರ ಸರ್ಕಾರವು ಅದಕ್ಕೆ ಒಪ್ಪಿಸಿದಂಥ ಅಥವಾ ಯಾವನೇ ವ್ಯಕ್ತಿಯು, ವ್ಯಕ್ತಿಗಳ ಸಂಘವು ಅಥವಾ ಯಾವುದೇ ಇತರ ಸಂಸ್ಥೆಯು ಅದರ ಗಮನಕ್ಕೆ ತಂದಂಥ ಪ್ರಕರಣಗಳನ್ನು ಒಳಗೊಂಡು, ಯಾವುದೇ ವಿದೇಶಿ ಮೂಲದಿಂದ ಭಾರತದಲ್ಲಿರುವ ಯಾವುದೇ ವೃತ್ತಪತ್ರಿಕೆಯು ಅಥವಾ ಸುದ್ದಿ ಸಂಸ್ಥೆಯು ಸ್ವೀಕರಿಸಿದ ನೆರವಿನ ಪ್ರಕರಣಗಳನ್ನು ಅವಲೋಕಿಸುವುದು:

ಪರಂತು, ಈ ಖಂಡದಲ್ಲಿರುವುದು ಯಾವುದೂ, ಯಾವುದೇ ವಿದೇಶೀ ಮೂಲದಿಂದ ಭಾರತದಲ್ಲಿನ ವೃತ್ತಪತ್ರಿಕೆಯು ಅಥವಾ ಸುದ್ದಿ ಏಜನ್ಸಿಯು ಸ್ವೀಕರಿಸಿದ ಯಾವುದೇ ನೆರವಿನ ಪ್ರಕರಣದ ಬಗ್ಗೆ, ಕೇಂದ್ರಸರ್ಕಾರವನ್ನು, ಅದು ಸೂಕ್ತವೆಂದು ಯೋಚಿಸುವ ಯಾವುದೇ ಇತರ ರೀತಿಯಲ್ಲಿ ವ್ಯವಹರಿಸಲು ಅಡ್ಡಿಪಡಿಸತಕ್ಕುದಲ್ಲ;

(ಜಿ) ಯಾವುದೇ ದೂತಾವಾಸದಲ್ಲಿನ ಅಥವಾ ಭಾರತದಲ್ಲಿನ ವಿದೇಶಿ ರಾಜ್ಯದ ಇತರ ಪ್ರತಿನಿಧಿಯು ಹೊರತಂದ ವೃತ್ತಪತ್ರಿಕೆಗಳನ್ನು ಒಳಗೊಂಡು ವಿದೇಶಿ ವೃತ್ತಪತ್ರಿಕೆಗಳು, ಅವುಗಳ ಪ್ರಸಾರ ಮತ್ತು ಪ್ರಭಾವ-ಇವುಗಳ ಅಧ್ಯಯನಗಳನ್ನು ಕೈಗೊಳ್ಳುವುದು.

**ವಿವರಣೆ:-** ಈ ಖಂಡದ ಉದ್ದೇಶಗಳಿಗಾಗಿ, "ವಿದೇಶ ರಾಜ್ಯ" ಎಂಬ ಪದಾವಳಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 87ಎ ಪ್ರಕರಣದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ;

(ಎಚ್) ವೃತ್ತಪತ್ರಿಕೆಗಳನ್ನು ಪ್ರಸಿದ್ಧಗೊಳಿಸುವಲ್ಲಿ ಅಥವಾ ಪ್ರಕಟಿಸುವಲ್ಲಿ ಅಥವಾ ಸುದ್ದಿ ಏಜೆನ್ಸಿಗಳಲ್ಲಿ ತೊಡಗಿರುವ ವ್ಯಕ್ತಿಗಳ ಎಲ್ಲಾ ವರ್ಗಗಳಲ್ಲಿ ಯುಕ್ತ ಕಾರ್ಯಸಂಬಂಧವನ್ನು ವೃದ್ಧಿಪಡಿಸುವುದು:

ಪರಂತು, ಈ ಖಂಡದಲ್ಲಿರುವುದು ಯಾವುದೂ, ಯಾವ ವಿವಾದಗಳಿಗೆ ಔದ್ಯಮಿಕ ವಿವಾದಗಳ ಅಧಿನಿಯಮ, 1947 (1947ರ 14)ರ ಅನ್ವಯವಾಗುವುದೋ ಆ ವಿವಾದಗಳ ಸಂಬಂಧದಲ್ಲಿ ಯಾವುದೇ ಪ್ರಕಾರ್ಯಗಳನ್ನು, ಪರಿಷತ್ತಿಗೆ ಪ್ರದಾನ ಮಾಡುವುದೆಂದು ಭಾವಿಸತಕ್ಕುದಲ್ಲ;

(ಐ) ಪತ್ರಿಕಾ ಸ್ವಾತಂತ್ರ್ಯಕ್ಕೆ ಬಾಧಕವನ್ನುಂಟು ಮಾಡಬಹುದಾದಂಥ ವೃತ್ತಪತ್ರಿಕೆಗಳ ಮತ್ತು ಸುದ್ದಿ ಏಜೆನ್ಸಿಗಳ ಒಡೆತನದ ಕೇಂದ್ರೀಕರಣ ಅಥವಾ ಅದರ ಬಗೆಗಿನ ಇತರ ಅಂಶಗಳಂಥ ಬೆಳವಣಿಗೆಗಳೊಂದಿಗೆ ಅದು ಆಸಕ್ತಿ ವಹಿಸುವುದು;

(ಜೆ) ಪರಿಷತ್ತಿಗೆ ವಹಿಸಿಕೊಡಬಹುದಾದಂಥ ಅಧ್ಯಯನಗಳನ್ನು ಕೈಕೊಳ್ಳುವುದು ಮತ್ತು ಕೇಂದ್ರ ಸರ್ಕಾರವು ಅದಕ್ಕೆ ಒಪ್ಪಿಸಿದ ಯಾವುದೇ ವಿಷಯದ ಬಗ್ಗೆ ಅದರ ಅಭಿಪ್ರಾಯವನ್ನು ವ್ಯಕ್ತಪಡಿಸುವುದು;

(ಕೆ) ಮೇಲಿನ ಪ್ರಕಾರ್ಯಗಳ ನಿರ್ವಹಣೆಗೆ ಪ್ರಾಸಂಗಿಕ ಅಥವಾ ಅನುಕೂಲಕರವಾಗಬಹುದಾದಂಥ ಇತರ ಕಾರ್ಯಗಳನ್ನು ಮಾಡುವುದು.

**14. ವಾಗ್ದಂಡನೆ ಮಾಡಲು ಅಧಿಕಾರ.**- ಪರಿಷತ್ತಿಗೆ ಸಲ್ಲಿಸಿದ ದೂರನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ, ವೃತ್ತಪತ್ರಿಕೆಯು ಅಥವಾ ಸುದ್ದಿ ಏಜೆನ್ಸಿಯು ಪತ್ರಿಕಾ ನೀತಿಯ ಅಥವಾ ಸಾರ್ವಜನಿಕ ಅಭಿರುಚಿಯ ಗುಣಮಟ್ಟಗಳನ್ನು ಉಲ್ಲಂಘಿಸಿದೆ ಎಂದು ಅಥವಾ ಸಂಪಾದಕನು ಅಥವಾ ಕಾರ್ಯನಿರತ ಪತ್ರಿಕೋದ್ಯಮಿಯು, ಯಾವುದೇ ವೃತ್ತೀಯ ದುರ್ನಡತೆಯನ್ನು ಮಾಡಿದ್ದಾನೆಂದು ನಂಬಲು ಕಾರಣವಿರುವಲ್ಲಿ, ಪರಿಷತ್ತು, ಸಂಬಂಧಪಟ್ಟ ವೃತ್ತಪತ್ರಿಕೆಗೆ ಅಥವಾ ಸುದ್ದಿ ಏಜೆನ್ಸಿಗೆ, ಸಂಪಾದಕನಿಗೆ ಅಥವಾ ಪತ್ರಿಕೋದ್ಯಮಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯನ್ನು ನಡೆಸಬಹುದು ಮತ್ತು ಹಾಗೆ ಮಾಡುವುದು ಅವಶ್ಯವೆಂದು ಅದಕ್ಕೆ ಮನದಟ್ಟಾದರೆ ಅದು, ಬರಹದಲ್ಲಿ ಕಾರಣಗಳನ್ನು ದಾಖಲು ಮಾಡಿ, ಆ ವೃತ್ತಪತ್ರಿಕೆಗೆ, ಸುದ್ದಿ ಏಜೆನ್ಸಿಗೆ, ಸಂಪಾದಕನಿಗೆ ಅಥವಾ ಪತ್ರಿಕೋದ್ಯಮಿಗೆ ಎಚ್ಚರಿಕೆ ಕೊಡಬಹುದು, ಛೀಮಾರಿ ಹಾಕಬಹುದು, ಅಥವಾ ವಾಗ್ದಂಡನೆ ಮಾಡಬಹುದು ಅಥವಾ ಸಂದರ್ಭಾನುಸಾರ ಸಂಪಾದಕನ ಅಥವಾ ಪತ್ರಿಕೋದ್ಯೋಗಿಯ ವರ್ತನೆಯನ್ನು ಅನುಮೋದಿಸದೆ ಇರಬಹುದು:

ಪರಂತು, ಪರಿಷತ್ತು, ಅದರ ಅಧ್ಯಕ್ಷನ ಅಭಿಪ್ರಾಯದಲ್ಲಿ ವಿಚಾರಣೆಯನ್ನು ನಡೆಸಲು ಯಾವುದೇ ಸಾಕಷ್ಟು ಕಾರಣ ಇರದಿದ್ದರೆ, ಆ ದೂರಿನ ಸಂಜ್ಞೇಯತೆಯನ್ನು ತೆಗೆದುಕೊಳ್ಳದೇ ಇರಬಹುದು.

(2) ಪರಿಷತ್ತು, ಹಾಗೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ, ಅದು ಯಾವುದೇ ವೃತ್ತಪತ್ರಿಕೆಯನ್ನು ಅದರಲ್ಲಿ ಪರಿಷತ್ತು ಸೂಕ್ತವೆಂದು ಯೋಚಿಸುವಂಥ ರೀತಿಯಲ್ಲಿ ಅಂಥ ವೃತ್ತಪತ್ರಿಕೆಯ, ಸುದ್ದಿ ಏಜೆನ್ಸಿಯ, ಸಂಪಾದಕನ ಅಥವಾ ಪತ್ರಿಕೋದ್ಯೋಗಿಯ ಹೆಸರನ್ನೂ ಒಳಗೊಂಡು ವೃತ್ತಪತ್ರಿಕೆಯ ಅಥವಾ ಸುದ್ದಿ ಏಜೆನ್ಸಿಯ, ಅದರಲ್ಲಿ ಕೆಲಸ ಮಾಡುತ್ತಿರುವ ಸಂಪಾದಕನ ಅಥವಾ ಪತ್ರಿಕೋದ್ಯಮಿಯ ವಿರುದ್ಧ ಈ ಪ್ರಕರಣದ ಮೇರೆಗಿನ ಯಾವುದೇ ವಿಚಾರಣೆಗೆ ಸಂಬಂಧಪಟ್ಟ ಯಾವುದೇ ವಿವರಗಳನ್ನು ಪ್ರಕಟಿಸುವಂತೆ ಅಗತ್ಯಪಡಿಸಬಹುದು.

(3) (1)ನೇ ಉಪ-ಪ್ರಕರಣದಲ್ಲಿರುವುದು ಯಾವುದೂ, ಪರಿಷತ್ತನ್ನು, ಯಾವ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಯು ಇತ್ಯರ್ಥದಲ್ಲಿ ಇರುವುದೋ ಆ ಯಾವುದೇ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸಲು ಸಾಧ್ಯಗೊಳಿಸುವುದೆಂದು ಭಾವಿಸತಕ್ಕುದಲ್ಲ.

(4) ಸಂದರ್ಭಾನುಸಾರ, (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಪರಿಷತ್ತಿನ ತೀರ್ಮಾನವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

**15. ಪರಿಷತ್ತಿನ ಸಾಮಾನ್ಯ ಅಧಿಕಾರಗಳು.**- ಈ ಅಧಿನಿಯಮದ ಮೇರೆಗೆ ಪರಿಷತ್ತು, ತನ್ನ ಪ್ರಕಾರ್ಯಗಳನ್ನು ನೆರವೇರಿಸುವ ಅಥವಾ ಯಾವುದೇ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಅದು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ

ದಾವೆಯ ಅಧಿವಿಚಾರಣೆಯನ್ನು ನಡೆಸುವಾಗ ಸಿವಿಲ್ ನ್ಯಾಯಾಲಯದಲ್ಲಿ ನಿಹಿತಗೊಂಡಿರುವಂಥವೇ ಅಧಿಕಾರಗಳನ್ನು ಭಾರತದಾದ್ಯಂತ ಹೊಂದಿರತಕ್ಕುದು, ಎಂದರೆ:-

(ಎ) ವ್ಯಕ್ತಿಗಳನ್ನು ಕರೆಯುವುದು ಮತ್ತು ಅವರ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಅವರನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಕಂಡು ಹಿಡಿಯುವುದು ಮತ್ತು ಪರಿಶೀಲನೆಯನ್ನು ಅಗತ್ಯ ಪಡಿಸುವುದು;

(ಸಿ) ಶಪಥಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಗಳನ್ನು ಅಥವಾ ಅದರ ಪ್ರತಿಗಳನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನ್ನುಗಳನ್ನು ಹೊರಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(2) (1) ನೇ ಉಪ-ಪ್ರಕರಣದಲ್ಲಿರುವುದು ಯಾವುದೂ, ಯಾವುದೇ ವೃತ್ತಪತ್ರಿಕೆಯನ್ನು, ಸುದ್ದಿ ಏಜೆನ್ಸಿಯನ್ನು, ಸಂಪಾದಕನನ್ನು ಅಥವಾ ಪತ್ರಿಕೋದ್ಯಮಿಯನ್ನು ಆ ವೃತ್ತಪತ್ರಿಕೆಯು ಪ್ರಕಟಿಸಿದ ಅಥವಾ ಆ ಸುದ್ದಿ ಏಜೆನ್ಸಿ, ಸಂಪಾದಕನು ಅಥವಾ ಪತ್ರಿಕೋದ್ಯಮಿಯು ಸ್ವೀಕರಿಸಿದ ಅಥವಾ ವರದಿ ಮಾಡಿದ ಯಾವುದೇ ಸುದ್ದಿಯ ಅಥವಾ ಮಾಹಿತಿಯ ಮೂಲವನ್ನು ಬಹಿರಂಗಪಡಿಸುವಂತೆ ಒತ್ತಾಯಪಡಿಸುತ್ತದೆ ಎಂದು ಭಾವಿಸತಕ್ಕುದಲ್ಲ.

(3) ಪರಿಷತ್ತು ನಡೆಸಿದ ಪ್ರತಿಯೊಂದು ವಿಚಾರಣೆಯನ್ನು ಭಾರತ ದಂಡ ಸಂಹಿತೆಯ (1860ರ 45)ರ 193ನೇ ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆ ಎಂಬುದಾಗಿ ಭಾವಿಸತಕ್ಕುದು.

(4) ಪರಿಷತ್ತು, ಈ ಅಧಿನಿಯಮದ ಮೇರೆಗೆ ಅದರ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಅಥವಾ ಅದರ ಯಾವುದೇ ಪ್ರಕಾರ್ಯವನ್ನು ನೆರವೇರಿಸುವ ಉದ್ದೇಶಕ್ಕಾಗಿ ಅದು ಅವಶ್ಯವೆಂದು ಪರ್ಯಾಲೋಚಿಸಿದರೆ, ಸರ್ಕಾರವನ್ನೂ ಒಳಗೊಂಡು, ಯಾವುದೇ ಪ್ರಾಧಿಕಾರದ ವರ್ತನೆಗೆ ಸಂಬಂಧಿಸಿದಂತೆ ಅದರ ಯಾವುದೇ ತೀರ್ಮಾನದಲ್ಲಿ ಅಥವಾ ವರದಿಯಲ್ಲಿ ಅದು ಸೂಕ್ತವೆಂದು ಯೋಚಿಸಬಹುದಾದಂಥ ಅಭಿಪ್ರಾಯೋಕ್ತಿಗಳನ್ನು ಕೊಡಬಹುದು.

**16. ಫೀಜುಗಳನ್ನು ವಿಧಿಸುವುದು.**- (1) ಪರಿಷತ್ತು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ನೋಂದಾಯಿತ ವೃತ್ತಪತ್ರಿಕೆಗಳ ಮತ್ತು ಸುದ್ದಿ ಏಜೆನ್ಸಿಗಳ ಮೇಲೆ ನಿಯಮಿಸಬಹುದಾದಂಥ ದರಗಳಲ್ಲಿ ಮತ್ತು ಅಂಥ ಫೀಜುಗಳನ್ನು ವಿಧಿಸಬಹುದು ಮತ್ತು ವಿವಿಧ ವೃತ್ತಪತ್ರಿಕೆಗಳಿಗೆ, ಅವುಗಳ ಪ್ರಸಾರವನ್ನು ಮತ್ತು ಇತರ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಬೇರೆ ಬೇರೆ ದರಗಳನ್ನು ನಿಯಮಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಪರಿಷತ್ತಿಗೆ ಸಂದಾಯ ಮಾಡಬೇಕಾದ ಯಾವುದೇ ಫೀಜುಗಳನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

**17. ಪರಿಷತ್ತಿಗೆ ಸಂದಾಯಗಳು.**- ಕೇಂದ್ರ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಯುಕ್ತ ವಿನಿಯೋಗವನ್ನು ಮಾಡಿದ ತರುವಾಯ, ಈ ಅಧಿನಿಯಮದ ಮೇರೆಗೆ ಪರಿಷತ್ತಿನ ಪ್ರಕಾರ್ಯಗಳ

ನೆರವೇರಿಕೆಗಾಗಿ ಕೇಂದ್ರ ಸರ್ಕಾರವು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಹಣದ ಮೊತ್ತಗಳನ್ನು ಅನುದಾನಗಳ ರೂಪದಲ್ಲಿ ಪರಿಷತ್ತಿಗೆ ಸಂದಾಯ ಮಾಡಬಹುದು.

**18. ಪರಿಷತ್ತಿನ ನಿಧಿ.**- (1) ಪರಿಷತ್ತು, ತನ್ನದೇ ಆದ ನಿಧಿಯನ್ನು ಹೊಂದಿರತಕ್ಕುದು ಮತ್ತು ಅದು ಸಂಗ್ರಹಿಸಿದ ಫೀಜುಗಳನ್ನು, ಅದಕ್ಕೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಸಂದಾಯ ಮಾಡಬಹುದಾದಂಥ ಎಲ್ಲ ಮೊತ್ತಗಳನ್ನು ಮತ್ತು ಯಾವುದೇ ಇತರ ಪ್ರಾಧಿಕಾರವು ಅಥವಾ ವ್ಯಕ್ತಿಯು ಅದಕ್ಕೆ ಕೊಟ್ಟ ಎಲ್ಲಾ ಅನುದಾನಗಳನ್ನು ಮತ್ತು ಮುಂಗಡಗಳನ್ನು ಆ ನಿಧಿಗೆ ಜಮೆ ಮಾಡತಕ್ಕುದು ಮತ್ತು ಅದರಿಂದ ಪರಿಷತ್ತು ಎಲ್ಲಾ ಸಂದಾಯಗಳನ್ನು ಮಾಡತಕ್ಕುದು.

(2) ಆ ನಿಧಿಗೆ ಸೇರಿದ ಎಲ್ಲಾ ಹಣವನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟು, ಪರಿಷತ್ತು ತೀರ್ಮಾನಿಸಬಹುದಾದಂಥ ಬ್ಯಾಂಕುಗಳಲ್ಲಿ ಠೇವಣಿಯಿಡತಕ್ಕುದು ಅಥವಾ ಅಂಥ ರೀತಿಯಲ್ಲಿ ಹೂಡತಕ್ಕುದು.

(3) ಪರಿಷತ್ತು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ, ಅದು ಸೂಕ್ತವೆಂದು ಯೋಚಿಸುವಂಥ ಮೊತ್ತಗಳನ್ನು ಖರ್ಚು ಮಾಡಬಹುದು ಮತ್ತು ಅಂಥ ಮೊತ್ತಗಳನ್ನು, ಪರಿಷತ್ತಿನ ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚಗಳೆಂದು ಪರಿಗಣಿಸತಕ್ಕುದು.

**19. ಬಜೆಟ್.**- ಪರಿಷತ್ತು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿವರ್ಷ ಮುಂಬರುವ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಅಂದಾಜು ಮಾಡಿದ ಜಮೆಗಳನ್ನು ಮತ್ತು ವೆಚ್ಚವನ್ನು ತೋರಿಸುವ ಬಜೆಟ್ಟನ್ನು ತಯಾರಿಸತಕ್ಕುದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು.

**20. ವಾರ್ಷಿಕ ವರದಿ.**- ಪರಿಷತ್ತು, ವರ್ಷಕ್ಕೊಂದು ಬಾರಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದಲ್ಲಿ ಹಿಂದಿನ ವರ್ಷದಲ್ಲಿ ಅದರ ಚಟುವಟಿಕೆಗಳ ಸಾರಾಂಶವನ್ನು ಕೊಡುವ ಮತ್ತು ವೃತ್ತಪತ್ರಿಕೆಗಳ ಮತ್ತು ಸುದ್ದಿ ಏಜೆನ್ಸಿಗಳ ಗುಣಮಟ್ಟಗಳ ಮತ್ತು ಅವುಗಳಿಗೆ ಸಂಬಂಧಿಸಿದ ಅಂಶಗಳ ಬಗ್ಗೆ ವಿವರವನ್ನು ಕೊಡುವ ವಾರ್ಷಿಕ ವರದಿಯನ್ನು ತಯಾರಿಸತಕ್ಕುದು ಮತ್ತು ಅದರ ಪ್ರತಿಗಳನ್ನು 22ನೇ ಪ್ರಕರಣದ ಮೇರೆಗೆ ನಿಯಮಿಸಿದ ರೀತಿಯಲ್ಲಿ ಲೆಕ್ಕಪರಿಶೋಧನೆ ಮಾಡಿದ ಲೆಕ್ಕಪತ್ರಗಳ ವಿವರ ಪತ್ರದೊಂದಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಸರ್ಕಾರವು, ಅದನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಇಡುವಂತೆ ಮಾಡತಕ್ಕುದು.

**21. ಮಧ್ಯಕಾಲೀನ ವರದಿಗಳು.**- 20ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಪರಿಷತ್ತು, ಸಾರ್ವಜನಿಕ ಮಹತ್ವವುಳ್ಳದ್ದೆಂದು ಪರ್ಯಾಲೋಚಿಸುವಂಥ, ಆ ವರ್ಷದಲ್ಲಿನ ಅದರ ಚಟುವಟಿಕೆಗಳ ಸಾರಾಂಶವನ್ನು ಕೊಡುವ ವರದಿಯನ್ನು ತಯಾರಿಸಬಹುದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಸರ್ಕಾರವು ಅದನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಇಡುವಂತೆ ಮಾಡತಕ್ಕುದು.

**22. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**- ಪರಿಷತ್ತಿನ ಲೆಕ್ಕಪತ್ರಗಳನ್ನು, ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ ರೀತಿಯಲ್ಲಿ ಇಡತಕ್ಕುದು ಮತ್ತು ಲೆಕ್ಕ ಪರಿಶೋಧನೆ ಮಾಡತಕ್ಕುದು.

## ಅಧ್ಯಾಯ-IV

### ಸಂಕೀರ್ಣ

**23. ಸದ್ಭಾವನೆಯಿಂದ ಕೈಕೊಂಡ ಕ್ರಮದ ಸಂರಕ್ಷಣೆ.**- (1) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಪರಿಷತ್ತು ಅಥವಾ ಅದರ ಯಾವನೇ ಸದಸ್ಯನ ಅಥವಾ ಪರಿಷತ್ತಿನ ನಿರ್ದೇಶನದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

(2) ಪರಿಷತ್ತಿನ ಅಧಿಕಾರದ ಮೇರೆಗೆ ಅದರಲ್ಲಿನ ಯಾವುದೇ ವಿಷಯದ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ವೃತ್ತಪತ್ರಿಕೆಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**24. ಸದಸ್ಯರು, ಮುಂತಾದವರು ಲೋಕ ನೌಕರರಾಗಿರತಕ್ಕುದು.**- ಪರಿಷತ್ತಿನ ಪ್ರತಿಯೊಬ್ಬ ಸದಸ್ಯನನ್ನು ಮತ್ತು ಪರಿಷತ್ತು ನೇಮಕ ಮಾಡಿದ ಪ್ರತಿಯೊಬ್ಬ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಭಾರತ ದಂಡ ಸಂಹಿತೆಯ (1860ರ 45)ರ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕನೌಕರನೆಂಬುದಾಗಿ ಭಾವಿಸತಕ್ಕುದು.

**25. ನಿಯಮ ರಚನಾಧಿಕಾರ.**- ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು:

ಪರಂತು, ಪರಿಷತ್ತನ್ನು ಸ್ಥಾಪಿಸಿರುವಾಗ, ಅಂಥ ಯಾವುವೇ ನಿಯಮಗಳನ್ನು ಆ ಪರಿಷತ್ತಿನೊಂದಿಗೆ ಸಮಾಲೋಚಿಸದೆ ರಚಿಸತಕ್ಕುದಲ್ಲ.

(2) ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:-

(ಎ) 5ನೇ ಪ್ರಕರಣದ (3)ನೇ ಉಪ-ಪ್ರಕರಣದ (ಎ), (ಬಿ) ಮತ್ತು (ಸಿ) ಖಂಡಗಳ ಮೇರೆಗೆ, ಪರಿಷತ್ತಿನ ಸದಸ್ಯರ ನಾಮನಿರ್ದೇಶನದ ವಿಧಾನ;

(ಬಿ) 5ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಹೆಸರುಗಳ ಪಟ್ಟಿಗಳನ್ನು ಆಹ್ವಾನಿಸಬಹುದಾದಂಥ ರೀತಿ;

(ಸಿ) ಆ ಪ್ರಕರಣದ (6)ನೇ ಉಪ-ಪ್ರಕರಣದ ಮೇರೆಗೆ 5ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯ ಸದಸ್ಯನ ಚುನಾವಣೆಗೆ ವಿಧಾನ;

(ಡಿ) ಪರಿಷತ್ತಿನ ಸಭೆಗಳಿಗೆ ಹಾಜರಾಗುವುದಕ್ಕಾಗಿ ಪರಿಷತ್ತಿನ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯಗಳು ಅಥವಾ ಫೀಜುಗಳು ಮತ್ತು 7ನೇ ಪ್ರಕರಣದ (1)ನೇ ಮತ್ತು (2)ನೇ ಉಪ-ಪ್ರಕರಣಗಳ ಮೇರೆಗೆ ಅಂಥ ಸದಸ್ಯರ ಇತರ ಸೇವಾ ಷರತ್ತುಗಳು;

(ಇ) 1ನೇ ಪ್ರಕರಣದ ಮೇರೆಗೆ ಪರಿಷತ್ತಿನ ಕಾರ್ಯದರ್ಶಿಯ ಮತ್ತು ಇತರ ನೌಕರರ ನೇಮಕಾತಿ;

(ಎಫ್) 15ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡದಲ್ಲಿ ಉಲ್ಲೇಖಿಸಲಾದ ವಿಷಯಗಳು;

(ಜಿ) 16ನೇ ಪ್ರಕರಣದ ಮೇರೆಗೆ ಪರಿಷತ್ತು ವಿಧಿಸಬಹುದಾದಂಥ ಫೀಜುಗಳ ದರಗಳು ಮತ್ತು ಅಂಥ ಫೀಜುಗಳನ್ನು ವಿಧಿಸಬಹುದಾದಂಥ ರೀತಿ;

(ಎಚ್) ಅನುಕ್ರಮವಾಗಿ 19ನೇ ಮತ್ತು 20ನೇ ಪ್ರಕರಣದ ಮೇರೆಗೆ ಪರಿಷತ್ತು, ಬಜೆಟನ್ನು ಮತ್ತು ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತಯಾರಿಸಬೇಕಾಗಿದೆಯೋ ಆ ನಮೂನೆ ಮತ್ತು ಆ ಕಾಲ;

(ಐ) 22ನೇ ಪ್ರಕರಣದ ಮೇರೆಗೆ ಪರಿಷತ್ತಿನ ಲೆಕ್ಕಪತ್ರಗಳನ್ನು ಇಡಬೇಕಾದ ಮತ್ತು ಪರಿಶೋಧಿಸಬೇಕಾದಂಥ ರೀತಿ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು, ಸಂದಾರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**26. ವಿನಿಯಮಗಳ ರಚಾನಾಧಿಕಾರ:**– (1) ಪರಿಷತ್ತು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗದೆ ಇರುವ ಹಾಗೆ–

(ಎ) ಪರಿಷತ್ತು ಅಥವಾ ಅದರ ಯಾವುದೇ ಸಮಿತಿಯ ಸಭೆಗಳನ್ನು ಮತ್ತು 9ನೇ ಪ್ರಕರಣದ ಮೇರೆಗೆ ಅದರಲ್ಲಿನ ಕಾರ್ಯಕಲಾಪವನ್ನು ನಡೆಸುವುದಕ್ಕೆ ವಿಧಾನವನ್ನು ವಿನಿಯಮಿಸುವುದಕ್ಕೆ;

(ಬಿ) 11ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಪರಿಷತ್ತು ನೇಮಕ ಮಾಡಿದ ನೌಕರರ ಸೇವಾ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸುವುದಕ್ಕೆ;

(ಸಿ) ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸುವ ರೀತಿಯನ್ನು ವಿನಿಯಮಿಸುವುದಕ್ಕೆ;

(ಡಿ) ವಿಧಿಸುವುದು ಸೂಕ್ತವೆಂದು ಪರಿಷತ್ತು ಯೋಚಿಸಬಹುದಾದಂಥ ಷರತ್ತುಗಳಿಗೊಳಪಟ್ಟು 18ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವುದೇ ಅದರ ಅಧಿಕಾರವನ್ನು ಅದರ ಅಧ್ಯಕ್ಷನಿಗೆ ಅಥವಾ ಕಾರ್ಯದರ್ಶಿಗೆ ಪ್ರತ್ಯಾಯೋಜಿಸುವುದಕ್ಕೆ;

(ಇ) ಯಾವ ಇತರ ವಿಷಯಕ್ಕಾಗಿ ಈ ಅಧಿನಿಯಮದ ಮೇರೆಗೆ, ವಿನಿಯಮಗಳ ಮೂಲಕ ಉಪಬಂಧಗಳನ್ನು ಮಾಡಬಹುದೋ ಆ ಯಾವುದೇ ಇತರ ವಿಷಯಗಳಿಗೆ–

– ವಿನಿಯಮಗಳನ್ನು ರಚಿಸಬಹುದು:

ಪರಂತು, (ಬಿ) ಖಂಡದ ಮೇರೆಗೆ ರಚಿಸಿದ ವಿನಿಯಮಗಳನ್ನು, ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ ಮಾತ್ರ ರಚಿಸತಕ್ಕುದು.

(2) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡುವಂತೆ ಮಾಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಅದನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ವಿನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

* * * *